# ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

## ಕಣ್ಗಾವಲು ಕಾರ್ಯನೀತಿ

| | |
|---|---|
| **ಪೀಠಿಕೆ** | ನೈಜ/ಯಥಾರ್ಥತೆಯಿಂದ ಕೂಡಿದ ವಿಷಯಗಳನ್ನು/ಸಮಸ್ಯೆಗಳನ್ನು ನಿರ್ದಿಷ್ಟ ನಮೂನೆಯಲ್ಲಿ ವರದಿ ಮಾಡುವ ಸಲುವಾಗಿ ನಿರ್ದೇಶಕರುಗಳು ಮತ್ತು ಉದ್ಯೋಗಿಗಳಿಗಾಗಿ ಒಂದು ಕಣ್ಗಾವಲು ವ್ಯವಸ್ಥೆಯ ಸ್ಥಾಪನೆಗೆ ಕಂಪನಿಗಳ ಅಧಿನಿಯಮ, 2013 ಅನುವು ಮಾಡಿರುತ್ತದೆ.<br>ಕಣ್ಗಾವಲು ವ್ಯವಸ್ಥೆಯು, ಈ ಶಿಳ್ಳೆ ಊದುವವರ (Whistle Blower) ಕಾರ್ಯನೀತಿಯ ಮೂಲಕ ವಿಷಯಗಳನ್ನು/ಸಮಸ್ಯೆಗಳನ್ನು ಕಡೆಗಣಿಸುವ ಅಥವಾ ಅವುಗಳನ್ನು ಬಾಹ್ಯವಾಗಿ ವ್ಯವಹರಿಸುವ ಬದಲು ಸಂಸ್ಥೆಯ ಒಳಗೇ ನೈಜ/ಯಥಾರ್ಥತೆಯಿಂದ ಕೂಡಿದ ವಿಷಯ/ಸಮಸ್ಯೆಗಳನ್ನು ಎತ್ತಿ ತೋರಿಸುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಪ್ರೋತ್ಸಾಹಿಸುವ ಮತ್ತು ಅನುಕೂಲ ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ. |
| **ಅನ್ವಯಗೊಳ್ಳುವಿಕೆ** | ಈ ಕಾರ್ಯನೀತಿಯು ಕಂಪನಿಯ ಎಲ್ಲಾ ಖಾಯಂ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಅನ್ವಯಗೊಳ್ಳುತ್ತದೆ (ಇಲ್ಲಿಂದ ಮುಂದಕ್ಕೆ 'ಶಿಳ್ಳೆ ಊದುವವರು' ಎಂಬುದಾಗಿ ಉಲ್ಲೇಖಿಸಲ್ಪಡುವ). |
| **ಕಾರ್ಯನೀತಿಯ ವ್ಯಾಪ್ತಿ** | Tಈ ಕಾರ್ಯನೀತಿಯು, ಅನುಮಾನಾಸ್ಪದ ಅನೈತಿಕ ವರ್ತನೆ ಅಥವಾ ಅನುಚಿತ ಅಭ್ಯಾಸಗಳು ಅಥವಾ ತಪ್ಪುಗಳಿಂದ ಕೂಡಿದ ನಡೆ, ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಂಪನಿಯ ಗಮನಕ್ಕೆ ತರುವ ಸಲುವಾಗಿ ಉದ್ಯೋಗಿಗಳಿಗೆ ಮತ್ತು ನಿರ್ದೇಶಕರುಗಳಿಗೆ ಮಾರ್ಗಗಳನ್ನು ಒದಗಿಸುವ ಗುರಿಯನ್ನು ಹೊಂದಿರುತ್ತದೆ. ಅಂತಹ ವಿಷಯಗಳು ಈ ಕೆಳಗಿನ ಸ್ವರೂಪದ್ದಾಗಿರಬಹುದು:<br>ಎ)ಭೌತಿಕವಾಗಿ ಅಥವಾ ವಿದ್ಯುನ್ಮಾನೀಯವಾಗಿ ನಿರ್ವಹಿಸಲಾಗಿರುವ ಕಂಪನಿಯ ಮಾಹಿತಿ/ದಾಖಲೆಗಳನ್ನು ನಿಯಮಬಾಹಿರವಾಗಿ ತಿದ್ದುವುದು<br>ಬಿ)ಸಾರ್ವಜನಿಕರ ಆರೋಗ್ಯ ಮತ್ತು ಭದ್ರತೆಗೆ ಒಂದು ಗಮನಾರ್ಹ ಮತ್ತು ನಿರ್ದಿಷ್ಟ ಅಪಾಯ ಕಂಡುಬಂದಿರುವುದು<br>ಸಿ)ಅಧಿಕಾರಿಗಳನ್ನು ನಿಂದಿಸುವುದು<br>ಡಿ)ಗೌಪ್ಯತೆಯ/ಸ್ವಂತಸ್ವಾಮ್ಯತೆಯ ಮಾಹಿತಿಯನ್ನು ಸೋರಿಕೆ ಮಾಡುವುದು<br>ಇ)ನಿಯಮ ಅಥವಾ ನಿಯಂತ್ರಣಗಳ ಉಲ್ಲಂಘನೆ<br>ಎಫ್)ಕಂಪನಿಯ ಸಂಪನ್ಮೂಲಗಳನ್ನು ಒಟ್ಟಾರೆಯಾಗಿ ವ್ಯರ್ಥ ಮಾಡುವುದು ಅಥವಾ ದುರುಪಯೋಗಪಡಿಸಿಕೊಳ್ಳುವುದು<br>ಜಿ) ನೀತಿ ಸಂಹಿತೆಯೂ ಸೇರಿದಂತೆ ಕಾರ್ಯನೀತಿಯನ್ನು ಉಲ್ಲಂಘಿಸುವಂತಹ ಚಟುವಟಿಕೆಗಳು<br>ಎಚ್) ನಕಲಿ ಸಹಿ ಅಥವಾ ಕಾನೂನುಬಾಹಿರವಾಗಿ ದಾಖಲೆಗಳನ್ನು ತಿದ್ದುವುದು<br>ಐ)ಭ್ರಷ್ಟಾಚಾರ/ಲಂಚ<br>ಜೆ) ಹಣಕಾಸು/ಆಸ್ತಿಗಳ ದುರುಪಯೋಗ<br>ಕೆ) ಹಣಕಾಸು ತ:ಖ್ತೆಗಳಲ್ಲಿ ವಂಚನೆ<br>ಎಲ್. ವಾಸ್ತವಿಕ ಅಥವಾ ಅನುಮಾನಾಸ್ಪದ ವಂಚನೆ<br>(ಮೇಲಿನ ಪಟ್ಟಿಯು ಕೇವಲ ದೃಷ್ಟಾಂತ ಘಟನೆಗಳಾಗಿರುತ್ತವೆಯೇ ಹೊರತು ಸಂಭವಿಸಬಹುದಾದ ಪರಿಪೂರ್ಣ ಘಟನೆಗಳನ್ನು ಒಳಗೊಂಡಿರುವ ಪಟ್ಟಿ ಎಂಬುದಾಗಿ ಭಾವಿಸಬಾರದು). |
| **ವಿವರಣೆಗಳು** | ಈ ಕಾರ್ಯನೀತಿಯಲ್ಲಿ, ಈ ಕೆಳಗಿನ ಪದಗಳು ಮತ್ತು ಅಭಿವ್ಯಕ್ತಪಡಿಸಿರುವಿಕೆಗಳು, ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಅವುಗಳಿಗೆ ಸಂಬಂಧಿಸಿದಂತೆ ತಿಳಿಸಿರುವ ರೀತಿಯಲ್ಲಿ ಅರ್ಥವನ್ನು ಹೊಂದಿರುತ್ತವೆ.<br><br>*"ಲೆಕ್ಕಪರಿಶೋಧನಾ ಸಮಿತಿ" ಎಂದರೆ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 177 ಹಾಗೂ ಅದರ ಅಡಿಯಲ್ಲಿ ರೂಪಿಸಿರುವ ನಿಯಮಗಳ ಅನುಸಾರ ರಚಿಸಲಾಗಿರುವ ಕಂಪನಿಯ ನಿರ್ದೇಶಕರುಗಳ ಮಂಡಳಿಯ ಲೆಕ್ಕಪರಿಶೋಧನಾ ಸಮಿತಿ.*<br><br>ಮಂಡಳಿ ಅಥವಾ ನಿರ್ದೇಶಕರುಗಳ ಮಂಡಳಿ ಎಂದರೆ ಕಂಪನಿಯ ನಿರ್ದೇಶಕರುಗಳ ಮಂಡಳಿ.<br><br>ಕಂಪನಿ ಎಂದರೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. |

| | |
|---|---|
| | ದೂರು ಎಂದರೆ ವಂಚನೆ, ಭ್ರಷ್ಟಾಚಾರ, ಕಳ್ಳತನ, ಹಣಕಾಸಿನ ದುರುಪಯೋಗ, ಅಥವಾ ನೀತಿ ಭ್ರಷ್ಟತೆ, ಇವುಗಳನ್ನು ಒಳಗೊಂಡಂತೆ ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದ ವಿಷಯಗಳ ಬಗ್ಗೆ ಒಂದು ಲಿಖಿತ ದೂರು.<br><br>ದೂರುದಾರರು ಎಂದರೆ ಉದ್ಯೋಗದಾತ ಲೆಕ್ಕಪರಿಶೋಧನಾ ಸಮಿತಿಗೆ ಕಂಪನಿಯ ಒಳಗೆ ನಡೆಯುತ್ತಿರುವ ಅನೈತಿಕ ಅಥವಾ ಅನುಚಿತ ಚಟುವಟಿಕೆಗಳ ಬಗ್ಗೆ ವರದಿ ಮಾಡುವ ಕಂಪನಿಯ ಓರ್ವ ಉದ್ಯೋಗಿ ಅಥವಾ ನಿರ್ದೇಶಕರು.<br><br>ಅನುಪಾಲನಾ ಅಧಿಕಾರಿ ಎಂದರೆ  ಕಂಪನಿಯ ಕಂಪನಿ ಕಾರ್ಯದರ್ಶಿ<br><br>ಶಿಸ್ತು ಕ್ರಮ ಎಂದರೆ, ವೇತನವನ್ನು ಹಿಡಿದಿಟ್ಟುಕೊಳ್ಳುವುದು, ಸೇವೆಯಿಂದ ಅಮಾನತ್ತಿನಲ್ಲಿಡುವುದು ಕಂಪನಿಯ ಸೇವೆಯಿಂದ ತೆಗೆದುಹಾಕುವುದನ್ನು ಒಳಗೊಂಡಂತೆ, ಆದರೆ ಇವುಗಳಿಗಷ್ಟೇ ಸೀಮಿತಗೊಳ್ಳದಂತೆ ಕಂಪನಿಯ ಕಂಪನಿ ಕಾರ್ಯದರ್ಶಿಯವರು ಯಾವುದೇ ದಂಡನಾ ಕ್ರಮ.<br><br>ಉದ್ಯೋಗಿ ಎಂದರೆ  ಅರೆಕಾಲಿಕ ಅಥವಾ ಪೂರ್ಣಕಾಲಿಕ ಆಧಾರದ ಮೇರೆಗೆ ಕಂಪನಿಯ ಉದ್ಯೋಗದಲ್ಲಿರುವ ಯಾವುದೇ ವ್ಯಕ್ತಿ,<br><br>ತನಿಖೆ ಎಂದರೆ ಒಂದು ದೂರಿಗೆ ಸಂಬಂಧಿಸಿದಂತೆ ತನಿಖಾ ಅಧಿಕಾರಿಯವರು ಒಂದು ಸಮಗ್ರ ಮತ್ತು ವ್ಯವಸ್ಥಿತ ರೀತಿಯಲ್ಲಿ ನಡೆಸುವ ತನಿಖೆ.<br><br>ತನಿಖಾ ಅಧಿಕಾರಿ ಎಂದರೆ ದೂರು ಪ್ರಕ್ರಿಯೆಯಲ್ಲಿ ವಿವರಿಸಿರುವ ರೀತಿಯಲ್ಲಿ ದೂರಿನ ಬಗ್ಗೆ ತನಿಖೆ ನಡೆಸುವ ವ್ಯಕ್ತಿ. |
| **ಅರ್ಥ ವ್ಯಾಖ್ಯಾನ** | ಕಾರ್ಯನೀತಿಯನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳುವುದು:<br>ಎ)ಈ ಮೂಲಕ ವಿವರಿಸಲ್ಪಟ್ಟಿರದ ಪದಗಳು ಕಂಪನಿಗಳ ಅಧಿನಿಯಮ, 2013 ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅಡಿಯಲ್ಲಿ ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಲಾಗಿರುವಂತಹ ಅರ್ಥವನ್ನೇ ಹೊಂದಿರುತ್ತವೆ<br>ಬಿ)ಕಾರ್ಯನೀತಿಯನ್ನು ಕಂಪನಿಯ ನಿರ್ದೇಶಕರುಗಳ ಮಂಡಳಿಯು ಮಾತ್ರ ಮಾರ್ಪಾಡು ಮಾಡಬಹುದು ಹಾಗೂ<br>ಸಿ) ಸಂದರ್ಭವು ಅನ್ಯಥಾ ರೀತಿಯಲ್ಲಿ ಅಗತ್ಯತೆಯನ್ನು ಹೊಂದಿರದ ಹೊರತು, ಎಲ್ಲಾ ಪದಗಳೂ (ಲಿಂಗ–ನಿರ್ದಿಷ್ಟವಾಗಿರಲಿ ಅಥವಾ ಲಿಂಗ ತಟಸ್ಥವಾಗಿರಲಿ), ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗ ಮತ್ತು ಏಕವಚನವನ್ನು ಆಮದು ಮಾಡಿಕೊಳ್ಳುವ ಪದಗಳು ಬಹುವಚನವನ್ನು ಮತ್ತು ವಿಪರ್ಯಯಗಳನ್ನು ಒಳಗೊಂಡಿರುತ್ತವೆ ಎಂಬುದಾಗಿ ಭಾವಿಸತಕ್ಕದ್ದು. |
| **ದೂರಿನ ಸಂಸ್ಕರಣೆ** | ಎ. ಕಂಪನಿಯ ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ಯಾವುದೇ ವಿಷಯದ ಬಗ್ಗೆ ದೂರನ್ನು ಸಲ್ಲಿಸಬಹುದು.<br>ಬಿ. ದೂರು ಲಿಖಿತ ನಮೂನೆಯಲ್ಲಿರತಕ್ಕದ್ದು ಮತ್ತು ಈ ಕೆಳಗಿನ ಅಂಶಗಳನ್ನು ಒಳಗೊಂಡಿರತಕ್ಕದ್ದು:<br>i. ದೂರಿನಲ್ಲಿ ಎತ್ತಲಾಗಿರುವ ಕಳವಳಿ/ಚಿಂತನೆಯ ಹಿನ್ನೆಲೆ ಮತ್ತು ವೃತ್ತಾಂತ;<br>ii. ದಿನಾಂಕಗಳು, ಸ್ಥಳಗಳು ಮತ್ತು ಹೆಸರುಗಳನ್ನು ಒಳಗೊಂಡಂತೆ ನಿರ್ದಿಷ್ಟ ದೃಷ್ಟಾಂತಗಳು;<br>iii.ಓರ್ವ ನಿರ್ದಿಷ್ಟ ಉದ್ಯೋಗಿ/ನಿರ್ದೇಶಕರ ಹೆಸರನ್ನು ತಿಳಿಸುವುದಕ್ಕೆ ಕಾರಣ; ಹಾಗೂ<br>iv. ದೂರಿನ ವಿಷಯದಲ್ಲಿ ಸಮರ್ಪಕ ಕಾರಣಗಳು ಮತ್ತು ಸಾಕ್ಷ್ಯಾಧಾರಗಳು.<br><br>ಸಿ. ದೂರನ್ನು ಈ ಕೆಳಗಿನ ರೀತಿಯಲ್ಲಿ ನಿರ್ವಹಿಸಬಹುದು:<br>i.ದೂರು ಪ್ರಧಾನ ವ್ಯವಸ್ಥಾಪಕರು ಅಥವಾ ನಿರ್ದೇಶಕರುಗಳವರೆಗೆ ಸಂಬಂಧಿಸಿದ್ದಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರು ನಾಮನಿರ್ದೇಶನ ಮಾಡುವ ವ್ಯಕ್ತಿಯಿಂದ ತನಿಖೆ.<br>ii. ದೂರು ಪ್ರಧಾನ ವ್ಯವಸ್ಥಾಪಕರವರೆಗಿನ ಶ್ರೇಣಿಯ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಆಗಿದ್ದಲ್ಲಿ, ಅನುಪಾಲನಾ ಅಧಿಕಾರಿಯವರಿಂದ ಅಥವಾ ಲೆಕ್ಕಪರಿಶೋಧನಾ ಸಮಿತಿಯು ನಾಮನಿರ್ದೇಶನ ಮಾಡುವ ಓರ್ವ ವ್ಯಕ್ತಿಯಿಂದ ತನಿಖೆ. |

| | |
|---|---|
| | ಆದಾಗ್ಯೂ, ಸಂದರ್ಭಗಳು ಅಂತಹ ಅಗತ್ಯತೆಯನ್ನು ಹೊಂದಿದ್ದಲ್ಲಿ, ಉದ್ಯೋಗಿಯು ನೇರವಾಗಿ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರಿಗೆ ದೂರನ್ನು ಸಲ್ಲಿಸಬಹುದು.<br>ಡಿ.ಅಗತ್ಯ ಬಿದ್ದಲ್ಲಿ ತನಿಖಾ ಅಧಿಕಾರಿಯವರು ದೂರಿನ ಬಗ್ಗೆ ಸರ್ಕಾರಿ ಅಧಿಕಾರಿಯವರಿಗೆ ಸೂಚಿಸಬಹುದು.<br>ಇ.ದೂರನ್ನು ಯಾರ ಬಗ್ಗೆ ಕೊಡಲಾಗಿದೆ ಎಂಬುದನ್ನು ಅವಲಂಭಿಸಿದಂತೆ ದೂರುದಾರರು ದೂರನ್ನು ಮೇಲೆ ತಿಳಿಸಿದ ಯಾವುದೇ ವ್ಯಕ್ತಿಗಳಿಗೆ ಸಲ್ಲಿಸಬಹುದು, ಒಂದು ನಿರ್ದಿಷ್ಟ ದೂರಿನ ಬಗ್ಗೆ ಯಾವುದೇ ತನಿಖಾ ಅಧಿಕಾರಿಯವರು ಯಾವುದೇ ಹಿತಾಸಕ್ತಿಯ ಸಂಘರ್ಷ್ಯವನ್ನು ಎದುರಿಸುತ್ತಿದ್ದಲ್ಲಿ, ಅವರು ಅಂತಹ ತನಿಖೆಯಲ್ಲಿ ಭಾಗವಹಿಸಕೂಡದು.<br>ಎಫ್.ದೂರನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗೆ ತನಿಖಾ ಅಧಿಕಾರಿಯವರು ದೂರುದಾರರಿಗೆ ಪತ್ರ ಬರೆಯತಕ್ಕದ್ದು:<br>i. ದೂರನ್ನು ಸ್ವೀಕರಿಸಲಾಗಿದೆ ಎಂಬುದಾಗಿ ಸ್ವೀಕೃತಿಯನ್ನು ನೀಡತಕ್ಕದ್ದು;<br>ii. ದೂರಿನ ಬಗ್ಗೆ ಪರಿಶೀಲಿಸುವ ಸಲುವಾಗಿ ಅಗತ್ಯವಿರುವ ಅಂದಾಜು ಕಾಲವಧಿಯನ್ನು ಸೂಚಿಸಿದಂತೆ ಮತ್ತು<br>iii.ಅಂತಿಮ ಪ್ರತಿಕ್ರಿಯೆಗೆ ಅಗತ್ಯವಿರುವ ಕಾಲಮಿತಿಯ ಅಂದಾಜನ್ನು ನೀಡತಕ್ಕದ್ದು.<br>ಜಿ.ತನಿಖಾ ಅಧಿಕಾರಿಯವರು, ಸಾಕ್ಷಾಧಾರಗಳು ಮತ್ತು ಮಾಹಿತಿಯ ಸಂಗ್ರಹಣೆಗಾಗಿ ದೂರುದಾರರೊಂದಿಗೆ ಒಂದು ಭೇಟಿಯನ್ನು ವ್ಯವಸ್ಥೆ ಮಾಡಬಹುದು.<br><br>ಎಚ್. ತನಿಖಾ ಅಧಿಕಾರಿಯವರು ಈ ಕೆಳಗಿನ ಕರ್ತವ್ಯಗಳನ್ನು ಹೊಂದಿರುವರು:<br>i. ಒಂದು ಸೂಕ್ತ ತನಿಖೆಯನ್ನು ನಡೆಸುವುದು;<br>ii. ದೂರಿಗೆ ಸಂಬಂಧಿಸಿದಂತೆ ಸಾಕ್ಷಾಧಾರಗಳನ್ನು ಸಂಗ್ರಹಿಸುವುದು;<br>iii.ಅಗತ್ಯ ತನಿಖೆಯನ್ನು ನಡೆಸಿದನಂತರ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದು;<br>iv. ಕಾನೂನಾತ್ಮಕ ಅಡಚಣೆಗಳ ಷರತ್ತಿಗೆ ಒಳಪಟ್ಟಂತೆ, ನಡೆಸಲಾದ ತನಿಖೆಯ ಫಲಿತಾಂಶವನ್ನು ತಿಳಿಸುವುದು.<br>v. ಅಗತ್ಯಬಿದ್ದಲ್ಲಿ, ದೂರನ್ನು ಯಾರಾದರೊಬ್ಬರು ತಮಗಿಂತ ಉನ್ನತ ಅಧಿಕಾರಿಯವರಿಗೆ ವಹಿಸುವುದು. |
| **ರಕ್ಷಣೆ** | ದೂರುದಾರರ ವಿರುದ್ಧವಾಗಿ ಯಾವುದೇ ತಾರತಮ್ಯ, ಕಿರುಕುಳ, ಬಲಿಪಶು ಮಾಡುವಂತಿಲ್ಲ/ತೊಂದರೆಗೆ ಸಿಲುಕಿಸುವಂತಿಲ್ಲ, ಉದ್ಯೋಗಿಗಳಿಗೆ ಸಂಬಂಧಿಸಿದಂತೆ, ಸೇಡು ತೀರಿಸಿಕೊಳ್ಳುವುದು, ಹೆದರಿಸುವುದು ಅಥವಾ ಬೆದರಿಸುವುದು ಅಥವಾ ಸೇವೆಯಿಂದ ತೆಗೆದುಹಾಕುವುದು/ಅಮಾನತ್ತಿನಲ್ಲಿಡುವುದು, ಶಿಸ್ತು ಕ್ರಮ, ವರ್ಗಾವಣೆ, ಹಿಂಬಡ್ತಿ ನೀಡುವುದು, ಮುಂಬಡ್ತಿಯನ್ನು ನಿರಾಕರಿಸುವುದು ಅಥವಾ ಆ ರೀತಿಯ ಯಾವುದೇ ಅನುಚಿತವಾದಂತಹ ಉದ್ಯೋಗ ಪರಿಪಾಠಗಳನ್ನು ಮಾಡುವಂತಿಲ್ಲ.<br><br>ತನಿಖೆಯ ಅಥವಾ ನಿಯಮನಿಬಂಧನೆಗಳ ಅಗತ್ಯತೆಯ ಷರತ್ತಿಗೆ ಒಳಪಟ್ಟಂತೆ ದೂರುದಾರರ ಗುರುತುಗಳನ್ನು ಮತ್ತು ವಿಷಯವನ್ನು ಸಾಧ್ಯವಾದಷ್ಟು ಮಟ್ಟಿಗೆ ಗೋಪ್ಯತೆಯಿಂದ ಇಡತಕ್ಕದ್ದು,<br><br>ತನಿಖಾ ಅಧಿಕಾರಿಯವರು, ಎತ್ತಲಾಗಿರುವ ವಿಷಯದ ಬಗ್ಗೆ ತನಿಖೆಯನ್ನು ನಡೆಸತಕ್ಕದ್ದು ಹಾಗೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಇನ್ನಿತರ ವಿಷಯಗಳ ಜೊತೆಗೆ ಈ ಕೆಳಗಿನ ಅಂಶಗಳನ್ನು ಒಳಗೊಂಡಂತೆ ಸೂಕ್ತ ಕ್ರಮವನ್ನು ವ್ಯವಸ್ಥಾಪನೆಗೆ ಶಿಫಾರಸು ಮಾಡತಕ್ಕದ್ದು:<br>i. ಉದ್ಯೋಗಿಯು ಯಾವ ಹುದ್ದೆಯಲ್ಲಿದ್ದರೋ ಅದೇ ಹುದ್ದೆಗೆ ಅಥವಾ ಅದಕ್ಕೆ ಸಮನಾದ ಹುದ್ದೆಗೆ ಪುನರ್–ನೇಮಕ ಮಾಡುವುದು ಅಥವಾ<br>ii. ಕಳೆದುಕೊಂಡಿರುವ ಸಂಬಳ, ಸಂಭಾವನೆ ಅಥವಾ ಯಾವುದೇ ಇನ್ನಿತರ ಪ್ರಯೋಜನಗಳು, ಇತ್ಯಾದಿಗಳ ಪರಿಹಾರಕ್ಕಾಗಿ ಆದೇಶ. |
| **ಅಪಾದನೆ** | ಒಂದು ಸಮರ್ಪಕ ತನಿಖೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಅಪಾದನೆಗಳನ್ನು ಮಾಡುವ ಓರ್ವ ವ್ಯಕ್ತಿಯು ಆತನ/ಆಕೆಯ ಗುರುತನ್ನು ಬಹಿರಂಗಪಡಿಸುವ ಅಗತ್ಯತೆಯನ್ನು ಈ ಕಾರ್ಯನೀತಿಯು ಹೊಂದಿರುತ್ತದೆ. |

| | |
|---|---|
| **ಗೋಪ್ಯತೆ** | ಈ ಕಾರ್ಯನೀತಿಯ ಅಡಿಯಲ್ಲಿನ ಎಲ್ಲಾ ಬಹಿರಂಗಪಡಿಸಿರುವಿಕೆಗಳನ್ನೂ ಕಂಪನಿಯು ಒಂದು ಸೂಕ್ಷ್ಮ ರೀತಿಯಲ್ಲಿ ಪರಿಗಣಿಸುತ್ತದೆ ಮತ್ತು ದೂರುದಾರರ ಗುರುತನ್ನು ಗೋಪ್ಯವಾಗಿಡುವ ಪ್ರಯತ್ನಗಳನ್ನು ಮಾಡುತ್ತದೆ. ಆದಾಗ್ಯೂ, ತನಿಖಾ ಪ್ರಕ್ರಿಯೆಯು ಮಾಹಿತಿಯ ಮೂಲವನ್ನು ಅನಿವಾರ್ಯವಾಗಿ ಬಹಿರಂಗಪಡಿಸಬಹುದು ಹಾಗೂ ಕಾನೂನು ಪ್ರಕ್ರಿಯೆಯನ್ನು ನಡೆಸುವ ಅಗತ್ಯತೆಯು ಬಿದ್ದಲ್ಲಿ ಗೋಪ್ಯತೆಯನ್ನು ಕಾಪಾಡಲು ಸಾಧ್ಯವಾಗದಂತಹ ಸಂದರ್ಭದಲ್ಲಿ ದೂರುದಾರರು ಒಂದು ಹೇಳಿಕೆಯನ್ನು ನೀಡುವ ಅಗತ್ಯತೆಯು ಉಂಟಾಗಬಹುದು |
| **ಸುಳ್ಳು / ದುರುದ್ದೇಶದಿಂದ ಕಿರುಕುಳ ಕೊಡುವ ಉದ್ದೇಶದ ಅಪಾದನೆಗಳು** | ಈ ಕಾರ್ಯನೀತಿಯ ಅಡಿಯಲ್ಲಿ ರಕ್ಷಣೆ ಎಂದರೆ, ದೂರುದಾರರು ತಾವು ಮಾಡುತ್ತಿರುವ ಅಪಾದನೆಯು ಸುಳ್ಳು ಎಂಬುದನ್ನು ಅರಿತೂ ದುರುದ್ದೇಶದಿಂದಲೇ ಕಿರುಕುಳ ಕೊಡುವ ಉದ್ದೇಶದಿಂದ ನೀಡುವ ಸುಳ್ಳು ಅಥವಾ ನಕಲಿ ಅಪಾದನೆಗಳಿಂದ ಉದ್ಭವಿಸುವ ಶಿಸ್ತು ಕ್ರಮಗಳಿಂದ ರಕ್ಷಣೆ ಎಂಬುದಾಗಿ ಅರ್ಥೈಸುವುದಿಲ್ಲ.<br><br>ಓರ್ವ ನಿರ್ದೇಶಕರು ಅಥವಾ ಓರ್ವ ಉದ್ಯೋಗಿಯು ವಿವೇಚನಾರಹಿತ ನಿಷ್ಪ್ರಯೋಜಕ ದೂರುಗಳನ್ನು ಪುನಃಪುನಃ ನೀಡಿದಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಸಂಬಂಧಿತ ನಿರ್ದೇಶಕರು ಅಥವಾ ಉದ್ಯೋಗಿಯ ವಿರುದ್ಧವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. |
| **ಕಾರ್ಯನೀತಿಯ ಅಡಿಯಲ್ಲಿ ವ್ಯಾಪಿಸಿರದ ವಿಷಯಗಳು/ ಸಮಸ್ಯೆಗಳು** | ಉದ್ಯೋಗ ಸಂಬಂಧಿತ ಅಥವಾ ಇತರೆ ವೈಯಕ್ತಿಕ ಕುಂದುಕೊರತೆಗಳನ್ನು ಈ ಕಾರ್ಯನೀತಿಯಿಂದ ಹೊರಗಿಡಲಾಗಿದೆ.<br>ಈಗಾಗಲೇ ಚರ್ಚಿಸಲಾಗಿರುವ ಅಥವಾ ಯಾವುದೇ ಶಿಸ್ತು ಕ್ರಮ ಅಥವಾ ಕಂಪನಿಯ ಇತರೆ ಕಾರ್ಯವಿಧಾನಗಳಿಗೆ ಸಂಬಂಧಿತ ಯಾವುದೇ ವಿಷಯಗಳು ಈ ಕಾರ್ಯನೀತಿಯ ಅಡಿಯಲ್ಲಿ ಬರುವುದಿಲ್ಲ. |
| **ಕಾರ್ಯನೀರ್ತಿಯನ್ನು ತಿದ್ದುಪಡಿ ಮಾಡುವ ಅಧಿಕಾರ** | ಕಂಪನಿಯ ನಿರ್ದೇಶಕರುಗಳ ಮಂಡಳಿಯು ಕಾರ್ಯನೀತಿಯನ್ನು ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಬಹುದು. |

*********